# ಥ್ರಿಲ್ಲರ್ ಕಥೆಗಳು

■ ರಮೇಶ್ ಶೆಟ್ಟಿಗಾರ್

## ಪ್ರೇತ ನರ್ತನ

ಇಬ್ಬರು ಉಂಡಾಡಿಗಳು ಮುಸ್ಸಂಜೆ ನಿರ್ಜನ ಪ್ರದೇಶದ ಹೊಲವೊಂದರಲ್ಲಿ ಮರಗೆಣಸಿನ ಗಿಡಗಳು ಹುಲುಸಾಗಿ ಬೆಳೆದುದನ್ನು ಕಂಡು ಕಳ್ಳತನದಲ್ಲಿ ಗೆಣಸನ್ನು ಅಗೆದು ಮೂಟೆ ಮಾಡಿಕೊಂಡು ಮನೆಗೆ ತಂದರು. ನಾಳೆ ಅದನ್ನು ಮಾರಿ ಹಣ ಗಳಿಸಬಹುದೆಂದು ಸಂತೋಷದಲ್ಲಿ ಅಲ್ಲೇ ರಾತ್ರಿ ಕುಡಿಯುತ್ತಾ ಹಾಡುತ್ತಿದ್ದಾಗ ಆ ಮೂಟೆ ಮಿಸುಕಾಡಿದಂತಾಯಿತು. ಆತಂಕದಲ್ಲಿ ಅವರು ಮೂಟೆ ಬಿಡಿಸಿದರೆ ಅದರೊಳಗೆ ಗೆಣಸಿರಲಿಲ್ಲ. ಬದಲಾಗಿ ಎಲುಬು ಮೂಳೆಗಳಿದ್ದವು. ಅವರು ಭಯಭೀತಿಯಿಂದ ನೋಡುತ್ತಿದ್ದಂತೆ ಅವೆಲ್ಲಾ ತನ್ನಷ್ಟಕ್ಕೆ ಜೋಡುತ್ತಾ ಅಸ್ಥಿಪಂಜರಗಳಾಗಿ ಅವರ ಸುತ್ತ ಪ್ರೇತ ನರ್ತನ ಮಾಡತೊಡಗಿದವು.

## ಕೊಳ್ಳಿ ದೆವ್ವದ ಕಾಟ

ದಂಪತಿಗಳು ರಿಸಾರ್ಟ್ ಒಂದಕ್ಕೆ ಹೊರಟು ಹತ್ತಿರ ತಲುಪುತ್ತಿದ್ದಂತೆ ಕಾರು ಕೆಟ್ಟಿತು. ಕತ್ತಲಾಗಿತ್ತು. ನಿರ್ಜನ ಪ್ರದೇಶ. ಮೊಬೈಲ್ ನೆಟ್ವರ್ಕ್ ಕೂಡಾ ಇಲ್ಲ. ಆಗ ಎದುರುಗಡೆ ಯಾರೋ ಕೊಳ್ಳಿ ಬೀಸುತ್ತಾ ಕೈಸನ್ನೆಯಲ್ಲಿ ಬನ್ನಿ ಎಂದು ಕರೆದಾಗ "ರಿಸಾರ್ಟಿನವರಿರಬೇಕು, ನೀನು ಅವನೊಟ್ಟಿಗೆ ಹೋಗಿ ಅಲ್ಲಿ ಯಾರಾದ್ರೂ ಮೆಕಾನಿಕ್ ಇದ್ರೆ ಕಳುಹಿಸು" ಎಂದು ಹೆಂಡತಿಯನ್ನು ಕಳುಹಿಸಿ ತಾನು ಕಾರಿನಲ್ಲೇ ಕುಳಿತು ಆಕೆ ಹೋಗುವುದನ್ನೇ ಗಮನಿಸುತ್ತಿದ್ದ. ಆಕೆ ಕೊಳ್ಳಿಯವನನ್ನು ಹಿಂಬಾಲಿಸುತ್ತಾ ರಿಸಾರ್ಟ್ ಗೇಟು ದಾಟಿ ರಿಸಾರ್ಟಿನೊಳಗೆ ಹೋದ್ರೆ ಸೆಕ್ಯುರಿಟಿ "ಅಯ್ಯೋ ಮೇಡಂ, ರಾತ್ರಿ ಒಬ್ಬಂಟಿಯಾಗಿ ಬಂದ್ರಾ? ಇವತ್ತು ಅಮಾವಾಸ್ಯೆ. ಹೊರಗೆಲ್ಲಾ ಕೊಳ್ಳಿದೆವ್ವದ ಕಾಟವಿದೆ. ಒಂಟಿಯಾಗಿ ಸಿಕ್ಕಿದವರ ರಕ್ತ ಹೀರಿ ಕೊಲ್ಲುತ್ತೆ" ಎನ್ನುತ್ತಿರಬೇಕಾದ್ರೆ ಕಾರಿನಲ್ಲಿದ್ದ ಗಂಡ ಜೋರಾಗಿ ಕಿರುಚಿದ್ದು ಕೇಳಿಸಿತು.

## ನೇಣು ಬಿಗಿದು ಆತ್ಮಹತ್ಯೆ

ಹೆಂಡತಿಯನ್ನು ಕೊಂದು ಫ್ಯಾನಿಗೆ ತಗುಲಿಸಿ ಆಕೆ ಸೀರೆಯಲ್ಲಿ ಕುಣಿಕೆ ಹಾಕಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಎಲ್ಲರನ್ನು ನಂಬಿಸಿ ಬಚಾವಾಗಿದ್ದ ಆತ ವರ್ಷದ ನಂತರ ಅದೇ ಫ್ಯಾನಿನ ಅಡಿಯಲ್ಲಿ ಮಲಗಿದ್ದ. ಮಧ್ಯರಾತ್ರಿಯಲ್ಲಿ ಅದೇ ಫ್ಯಾನಿನಿಂದ ಸೀರೆ ಇಳಿಯುತ್ತಾ ಬಂದು ಅವನ ಕುತ್ತಿಗೆಯನ್ನು ಸುತ್ತುವರಿಯಿತು. ಆಗ ಆತ ಎದ್ದು ಫ್ಯಾನ್ ಮತ್ತು ಲೈಟ್ ಸ್ವಿಚ್ ಹಾಕುವಾಗ ಅಲ್ಲಿದ್ದ ಆಕೆ ಗಹಗಹಿಸಿ ನಕ್ಕಳು ಅಷ್ಟೇ. ಮಾರನೆಯ ದಿನಪತ್ರಿಕೆಯಲ್ಲಿ ವರದಿಯಾಗಿತ್ತು 'ಹೆಂಡತಿಯ ಅಗಲುವಿಕೆಯ ನೋವಿನಿಂದ ಗಂಡ ಅದೇ ಫ್ಯಾನಿಗೆ ಸೀರೆಯಿಂದ ನೇಣು ಬಿಗಿದು ಆತ್ಮಹತ್ಯೆ'. ■

